ಸಿಗುತ್ತವೆ. ಈಗೀಗ ಖರೀದಿ ಮಾಡುವವರಿಗಿಂತ ಬಜಾರ್ ನೋಡಲೆಂದೇ ಹೆಚ್ಚಿಗೆ ಬರುತ್ತಾರೆ' ಎನ್ನುತ್ತಾರೆ ಇಲ್ಲಿನ ವ್ಯಾಪಾರಿಗಳು. 'ವಿದೇಶಿ ಪ್ರವಾಸಿಗರಿಗೆ ನಮ್ಮನ್ನು ತೋರಿಸುತ್ತಾ ಟೂರಿಸ್ಟ್ ಗೈಡ್ ವಿವರಿಸುವಾಗ, ಪ್ರಾಣಿ ಸಂಗ್ರಹಾಲಯದಲ್ಲಿನ ಪ್ರಾಣಿಯನ್ನು ಅವರಿಗೆ ತೋರಿಸಿದಂತೆ ನಮಗೆ ಅನಿಸುತ್ತದೆ' ಎಂದು ಇಲ್ಲಿನ ಅಂಗಡಿಯವರು ಬೇಸರ ವ್ಯಕ್ತಪಡಿಸುವುದೂ ಇದೆ.

ಈ ಬಜಾರ್‌ನಲ್ಲಿ ದಿನನಿತ್ಯ ಉಪಯೋಗಿಸುವ ವಸ್ತುಗಳಿಂದ ಹಿಡಿದು ಎಲ್ಲಾ ಪ್ರಕಾರದ ಸಾಮಗ್ರಿಗಳು ಸಿಗುತ್ತವೆ. ಹಳೆ ಕ್ಯಾಮೆರಾಗಳು, ಮೋಟಾರುಗಳ ಬಿಡಿ ಭಾಗಗಳು, ಬಟ್ಟೆ, ಎಲೆಕ್ಟ್ರಾನಿಕ್ ಉಪಕರಣಗಳು, ಆಲಂಕಾರಿಕ ಸಾಮಾನುಗಳು... ಕದ್ದ ವಾಹನಗಳ ಬಿಡಿಭಾಗಗಳಿಂದ ಹಿಡಿದು, ಮೊಬೈಲ್‌ಗಳು, ಟೇಬಲ್ ಫ್ಯಾನ್, ಟೆಲಿವಿಜನ್, ರೇಡಿಯೊ, ಗೃಹಾಲಂಕಾರಿಕ ಸಾಮಗ್ರಿಗಳು, ಹಳೆಯ ಗ್ರಾಮಾಫೋನ್‌ಗಳು, ವಿವಿಧ ಉಪಕರಣಗಳು, ವಿವಿಧ ಪ್ರಕಾರದ ಕತ್ತಿ, ಆಯುಧಗಳು, ಎಲೆಕ್ಟ್ರಾನಿಕ್ ವಸ್ತುಗಳು, ಶೂಗಳು, ಜಿಮ್ ಉಪಕರಣಗಳು, ಹಾರ್ಡ್‌ವೇರ್, ಕಿಚನ್ ಎಲೆಕ್ಟ್ರಾನಿಕ್ಸ್, ಬಟ್ಟೆಗಳು, ಬ್ರ್ಯಾಂಡೆಡ್ ವಸ್ತುಗಳು, ರೋಬಾಟ್‌ಗಳು ಎಲ್ಲವೂ ಇಲ್ಲಿ ಸಿಗುವುದು. ಮಾರಾಟಕ್ಕಿಟ್ಟ ಸಾಮಗ್ರಿಗಳಲ್ಲಿ ಬೆಲೆಬಾಳುವ ವಸ್ತುಗಳಿಗೂ ಜಾಗವಿದೆ.

ಗುಜರಿ ಅಂಗಡಿಗಳು ಪ್ರತ್ಯೇಕ ಇವೆ. ಇಲ್ಲಿನ ಯಾವ ವಸ್ತುಗಳಿಗೂ ನಿಗದಿತ ದರ ಇರುವುದಿಲ್ಲ. ಗ್ರಾಹಕರು ಮತ್ತು ವ್ಯಾಪಾರಿಗಳ ಮಾತುಗಾರಿಕೆಗೆ ಹೊಂದಿಕೊಂಡು ದರ ನಿಗದಿಯಾಗುತ್ತದೆ. ಗ್ರಾಹಕನೂ ಚಾಲಾಕಿ ಇರುವುದು ಅವಶ್ಯಕ. ಇಲ್ಲಿನ ಯಾವ ವಸ್ತುಗಳಿಗೂ ಗ್ಯಾರಂಟಿ ಇರುವುದಿಲ್ಲ. ಹಾಗಾಗಿ 'ಗ್ರಾಹಕನ ಅದೃಷ್ಟ'ದ ಮೇಲೆ ಎಲ್ಲವೂ ಅವಲಂಬಿತ.

'ನಾವೇ ಇಲ್ಲಿ ವಸ್ತುಗಳನ್ನು ಕೆಲವರಿಂದ ಖರೀದಿಸಿ, ಇಲ್ಲೇ ಮಾರುತ್ತೇವೆ. ಅದು ಕಳ್ಳತನದ ವಸ್ತುಗಳೋ ಅಲ್ಲವೋ ಎಂದು ಕೇಳಲು ಹೋಗುವುದಿಲ್ಲ. ಗ್ರಾಹಕರಿಗೂ ಆ ವಸ್ತುಗಳು ಕಳ್ಳತನದ್ದೋ ಅಲ್ಲವೋ ಎಂಬುದನ್ನು ತಿಳಿದುಕೊಳ್ಳುವ ಅಗತ್ಯವೂ ಇರೋದಿಲ್ಲ' ಎನ್ನುತ್ತಾರೆ ವ್ಯಾಪಾರಿಗಳು. ಈ ಬಜಾರ್‌ನಲ್ಲಿ ಕಳ್ಳಮಾಲುಗಳು ಮಾರಾಟವಾಗುತ್ತವೆ ಎಂದು ತಿಳಿದಿದ್ದರೂ ಗ್ರಾಹಕರು ಬಂದೇ ಬರುತ್ತಾರೆ. ಇಲ್ಲಿನ ವಸ್ತುಗಳೆಲ್ಲವೂ ಮೊದಲು ಬೇರೆಯವರದ್ದಾಗಿತ್ತು ಎನ್ನುವುದಂತೂ ನಿಜ. ಕಳೆದುಹೋದ ವಸ್ತುಗಳನ್ನು ಮರಳಿ ಪಡೆಯಲು ಅಲೆದಾಡುವ ಅನೇಕ ಜನರೂ ಇಲ್ಲಿ ಕಾಣಸಿಗುತ್ತಾರೆ.

## ಬಾಲಿವುಡ್ ಸಂಬಂಧ

ಬಾಲಿವುಡ್ ಮತ್ತು ಟೀವಿ ಧಾರಾವಾಹಿಗಳ ಸೆಟ್, ವಿನ್ಯಾಸಗಳಿಗೆ ಚೋರ್ ಬಜಾರ್ ಅನಿವಾರ್ಯವಾಗಿದೆ. ಹಳೆಯ ರೇಡಿಯೊ ಮತ್ತು ಗ್ರಾಮಾಫೋನ್‌ಗಳ ಎಲ್ಲ ಅಗತ್ಯಗಳನ್ನು, ಕ್ಯಾಸೆಟ್‌ಗಳನ್ನು ಒದಗಿಸುವುದು ಚೋರ್ ಬಜಾರ್. 'ಪೀಕೆ' ಸಿನಿಮಾದಲ್ಲಿ ಆಮೀರ್‌ಖಾನ್ ಕೈಯಲ್ಲಿನ ಟ್ರಾನ್ಸಿಸ್ಟರ್ ಎಲ್ಲಿಂದ ಬಂದದ್ದು ಗೊತ್ತೆ? ಚೋರ್ ಬಜಾರಿನ ಹಾಜಿ ಇಬ್ರಾಹಿಮ್ ಅವರ ಅಂಗಡಿಯಿಂದ. ಅದನ್ನು 227 ರೂಪಾಯಿಗೆ ಇಲ್ಲಿ ಕೊಂಡುಕೊಂಡಿದ್ದರು ಎನ್ನಲಾಗಿದೆ. 'ರಯೀಸ್' ಮತ್ತು 'ಬಾಂಬೆ' ಮೊದಲಾದ ಸಿನಿಮಾಗಳ ಸೆಟ್‌ಗಳಲ್ಲಿ ಈ ಬಜಾರ್‌ನ ಕೊಡುಗೆಯೂ ಬಹಳವಿತ್ತು. ದೇಶದೆಲ್ಲೆಡೆಯಿಂದ ಬರುವ ಸಂಗ್ರಾಹಕರಿಗೆ ಹಳೆಯ ವಿನೈಲ್ ದಾಖಲೆಗಳು, ಕ್ಯಾಸೆಟ್‌ಗಳು ಮತ್ತು ಡಿವಿಡಿಗಳು ಇಲ್ಲಿ ಲಭ್ಯ. ಭಾರತೀಯ ಚಲನಚಿತ್ರ, ವೆಸ್ಟರ್ನ್ ಸೇರಿದಂತೆ ಯಾವುದೇ ಸಂಗೀತದ ಯಾವುದೇ ದಾಖಲೆಗಳೂ ಇಲ್ಲಿ ಸಿಗಬಲ್ಲವು.

2008ರಲ್ಲಿ ಪಾಕ್ ಉಗ್ರರು ಮುಂಬೈ ಮೇಲೆ ದಾಳಿ ನಡೆಸಿದಾಗ ಪೊಲೀಸ್ ಅಧಿಕಾರಿ ಎಟಿಎಸ್ ಮುಖ್ಯಸ್ಥ ಹೇಮಂತ ಕರ್ಕರೆ ಸಾವನ್ನಪ್ಪಿದ್ದರು. ಅವರ ಬುಲೆಟ್ ಪ್ರೂಫ್ ಜಾಕೆಟ್ ಅನಂತರ ಕಾಣೆಯಾಗಿತ್ತು. ಮುಂಬೈ ಪೊಲೀಸರಿಗೆ ಅದೊಂದು ಬಿಡಿಸಲಾರದ ಸಮಸ್ಯೆಯಾಗಿತ್ತು. 2010ರಲ್ಲಿ ಮುಂಬೈ ಪೊಲೀಸ್ ಅಪರಾಧ ಶಾಖೆಯ ಅಧಿಕಾರಿಗಳು ಈ ಜಾಕೆಟ್ ಹುಡುಕುವ ನೆಪದಲ್ಲಿ ಚೋರ್ ಬಜಾರ್‌ಗೂ ಬಂದಿದ್ದರು.



ಚೋರ್ ಬಜಾರ್‌ನೊಳಗೆ ಆಟೊಮೊಬೈಲ್ ಬಜಾರ್ ಕೂಡ ಅಷ್ಟೇ ಆಕರ್ಷಣೀಯ. ವಿಶ್ವದ ಎಲ್ಲ ಆಟೊಮೊಬೈಲ್‌ನ ಬಿಡಿಭಾಗಗಳು ನೈಜ ಬೆಲೆಗಿಂತ ಬಹಳ ಕಡಿಮೆ ಬೆಲೆಗೆ ದೊರೆಯುತ್ತವೆ. ಅಂದಹಾಗೆ, ಇಲ್ಲಿ ಕಾರು ಅಥವಾ ಬೈಕ್ ಪಾರ್ಕ್ ಮಾಡುವ ಮುನ್ನ ಯೋಚಿಸಬೇಕು. ಯಾಕೆಂದರೆ ಅದರ ಪಾರ್ಟ್ಸ್ ತೆಗೆದು ಇಲ್ಲೇ ಪಕ್ಕದ ಅಂಗಡಿಯಲ್ಲಿ ಮಾರಾಟ ಮಾಡಲೂಬಹುದು!

## ಹೆಸರಿನ ಹಿಂದಿನ ಕಥೆಗಳು!

ಸುಮಾರು 150 ವರ್ಷಗಳ ಮೊದಲು ಜೋರಾದ ಧ್ವನಿಯಲ್ಲಿ ಕೂಗುತ್ತಾ ಇಲ್ಲಿನ ಬೀದಿ ವ್ಯಾಪಾರಿಗಳು ತಮ್ಮ ವಸ್ತುಗಳನ್ನು ಮಾರುತ್ತಿದ್ದರು. ಈ ಕಾರಣ ಆಗ 'ಶೋರ್ ಬಜಾರ್' (ಶೋರ್ ಅಂದರೆ ಬೊಬ್ಬೆ) ಎಂದು ಕರೆಯುತ್ತಿದ್ದರು.

ಆದರೆ ಬ್ರಿಟಿಷರ ಬಾಯಿಯಲ್ಲಿ ಅದು 'ಚೋರ್ ಬಜಾರ್' ಎಂದು ಕರೆಯಲ್ಪಟ್ಟಿತು. ಆ ದಿನಗಳಲ್ಲಿ ಈ ಬಜಾರ್ ಡಂಕನ್ ರೋಡ್ (ಗೋಲ್‌ದೇವಲ್ ಮಂದಿರ) ಬಳಿ ಮಾತ್ರ ಇತ್ತು ಎನ್ನಲಾಗಿದೆ.

'ಚೋರ್ ಬಜಾರ್' ಹೆಸರಿಗೆ ಮತ್ತೊಂದು ಕಥೆಯೂ ಇದೆ. ಒಬ್ಬ ಕಳ್ಳ ಇಲ್ಲಿನ ಕೈಗಾಡಿಯಲ್ಲಿದ್ದ ಒಂದು ಕೋಳಿ ಕದ್ದುಬಿಟ್ಟನಂತೆ. ಅದು ಗೊತ್ತಾಗಿ ಎಲ್ಲರೂ ದೊಡ್ಡ ಸ್ವರದಲ್ಲಿ 'ಚೋರ್ ಚೋರ್' ಎಂದು ಓಡಿಸಿದರಂತೆ. ಅನಂತರ ಇಲ್ಲಿನ ಬಜಾರ್‌ಗೆ ಶಾಶ್ವತವಾಗಿ 'ಚೋರ್ ಬಜಾರ್' ಎಂಬ ಹೆಸರು ಬಂತು ಎನ್ನುವುದೂ ಇದೆ.

ಚೋರ್ ಬಜಾರ್‌ಗಳು ಇಂದು ಮುಂಬೈ ನಗರದ ಇತರ ಭಾಗಗಳಲ್ಲಿಯೂ ಕಾಣಸಿಗುತ್ತವೆ. ಅವುಗಳಲ್ಲಿ ಪ್ರಸಿದ್ಧಿ ಇರುವುದು ಕಾಮಾಟಿಪುರದ ದಲಾಲ್ ಎಸ್ಟೇಟ್‌ನ ಡೇಡ್ ಗಲ್ಲಿಯಲ್ಲಿನ ಸೀಕ್ರೆಟ್ ಬಜಾರ್. ಪ್ರತಿ ಶುಕ್ರವಾರ ಮತ್ತು ಗುರುವಾರ ಬೆಳಿಗ್ಗೆ 4 ಗಂಟೆಗೆ ಪ್ರಾರಂಭವಾಗಿ ಬೆಳಿಗ್ಗೆ 8 ಗಂಟೆಗೆಲ್ಲ ಮುಚ್ಚಿಬಿಡುತ್ತದೆ.

## ಬಜಾರ್ ಉಳಿಯುವುದೇ?

ಇಲ್ಲಿನ ಸೈಫಿ ಬುರ್ಹಾನಿ ಅಪ್ಲಿಫ್ಟ್‌ಮೆಂಟ್ ಟ್ರಸ್ಟ್‌ನ ಕ್ಲಸ್ಟರ್ ಡೆವಲಪ್‌ಮೆಂಟ್ ಕಾಮಗಾರಿ, 2016ರಿಂದ ಭರದಿಂದ ಸಾಗುತ್ತಿದೆ. ಭೆಂಡಿ ಬಜಾರ್ ಕೂಡ ಆ ಅಭಿವೃದ್ಧಿ ನಕ್ಷೆಯಲ್ಲಿ ಸೇರಿದೆ. ಈ ಯೋಜನೆ ಕಾರಣದಿಂದ ಭೆಂಡಿ ಬಜಾರ್ ಕ್ಷೇತ್ರ ಬಹುಮಹಡಿ ಕಟ್ಟಡಗಳಿಗೆ ಸ್ಥಳಾಂತರಗೊಳ್ಳುತ್ತಿದೆ. ಹಾಗಿರುವಾಗ ಇದರಲ್ಲಿನ ಚೋರ್ ಬಜಾರ್ ಮೂಲ ಸ್ವರೂಪ ಹಾಗೇ ಉಳಿಯಬಹುದೇ? ಅಥವಾ ಇತಿಹಾಸ ಸೇರಬಹುದೇ?

ಪ್ರತಿಕ್ರಿಯಿಸಿ: feedback@sudha.co.in